14.09.2024 : 19.35hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

14.09.2024 :19.35hrs

*******

ಮುಖ್ಯಾಂಶಗಳು :

1. ಜಮ್ಮು ಮತ್ತು ಕಾಶ್ಮೀರ ಹಾಗೂ ಹರಿಯಾಣ ವಿಧಾನಸಭಾ ಚುನಾವಣೆ; ಪ್ರಧಾನಿ ಅವರಿಂದ ಭರದ ಪ್ರಚಾರ; ಕಾಂಗ್ರೆಸ್‌ನಿಂದ ವೀಕ್ಷಕರ ನೇಮಕ
2. ಹಿಂದಿ ಹಾಗೂ ಪ್ರಾದೇಶಿಕ ಭಾಷೆಗಳ ನಡುವಿನ ಸಂಬಂಧ ಬಲಗೊಳಿಸಲು ನಿರ್ಧಾರ - ಕೇಂದ್ರ ಗೃಹ ಸಚಿವ ಅಮಿತ್ ಶಾ
3. ಗ್ರಾಹಕರಿಗೆ ಸುಲಭ ಬೆಲೆಯಲ್ಲಿ ಈರುಳ್ಳಿ ಲಭ್ಯತೆ ಖಾತ್ರಿಪಡಿಸಲು ಕೇಂದ್ರದಿಂದ ಸಗಟು ಮಾರಾಟ ಕಾರ್ಯತಂತ್ರ
4. ಏಷ್ಯನ್ ಹಾಕಿ ಚಾಂಪಿಯನ್ ಶಿಪ್ ಪಾಕಿಸ್ತಾನ ವಿರುದ್ಧ ಭಾರತಕ್ಕೆ ಜಯ

********

ಜಮ್ಮು ಮತ್ತು ಕಾಶ್ಮೀರ ಹಾಗೂ ಹರಿಯಾಣ ವಿಧಾನಸಭಾ ಚುನಾವಣೆಗಾಗಿ ರಾಜಕೀಯ ಪಕ್ಷಗಳಿಂದ ಭರದ ಪ್ರಚಾರ ಸಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಜಮ್ಮು-ಕಾಶ್ಮೀರದ ದೋಢಾದಲ್ಲಿಂದು ಬಿಜೆಪಿ ಅಭ್ಯರ್ಥಿ ಪರವಾಗಿ ಮತಯಾಚನೆ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈ ಚುನಾವಣೆ ಈ ಕೇಂದ್ರಾಡಳಿತ ಪ್ರದೇಶದ ಭವಿಷ್ಯವನ್ನು ನಿರ್ಧರಿಸಲಿದೆ. ಇತರ ರಾಜಕೀಯ ಪಕ್ಷಗಳು ಜನರನ್ನು ಕಡೆಗಣಿಸಿ, ತಮ್ಮ ತಮ್ಮ ಕುಟುಂಬದ ಹಿತದಲ್ಲಿ ಆಸಕ್ತಿ ತೋರಿವೆ. ಜಮ್ಮು ಮತ್ತು ಕಾಶ್ಮೀರದ ಯುವಜನತೆ ಭಯೋತ್ಪಾದಕತೆಯಿಂದ ಬಳಲುತ್ತಿದ್ದು, ಪರಿವಾರ ವಾದ ಪ್ರೋತ್ಸಾಹಿಸುತ್ತಿರುವ ಪಕ್ಷಗಳು ಜನರನ್ನು ತಪ್ಪು ದಾರಿಗೆ ಎಳೆಯುತ್ತಿವೆ ಎಂದು ಆಪಾದಿಸಿದರು. ಈ ಪ್ರದೇಶದ ಪ್ರತಿ ಮಗು ಉತ್ತಮ ಶಿಕ್ಷಣ ಪಡೆಯಬೇಕು. ಈ ಹಿನ್ನೆಲೆಯಲ್ಲಿ ಬಿಜೆಪಿ ಸರ್ಕಾರ ಕೇಂದ್ರಾಡಳಿತ ಪ್ರದೇಶದ ವಿವಿಧೆಡೆ ಶಾಲಾ-ಕಾಲೇಜುಗಳನ್ನು ಸ್ಥಾಪಿಸಿದೆ. ದೋಡಾದಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಬೇಕೆಂಬ ಬಹುದಿನಗಳ ಬೇಡಿಕೆಯನ್ನು ಕೂಡ ಬಿಜೆಪಿ ಸರ್ಕಾರ ಈಡೇರಿಸಿದೆ ಎಂದು ಪ್ರಧಾನಮಂತ್ರಿ ಹೇಳಿದರು. ನಂತರ ಕುರುಕ್ಷೇತ್ರದಲ್ಲಿ ಪಕ್ಷದ ಹರಿಯಾಣ ವಿಧಾನಸಭೆ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದರು. ಕುರುಕ್ಷೇತ್ರದ

ಥೀಮ್ ಪಾರ್ಕ್‌ನಲ್ಲಿ ಸಂಜೆ ನಡೆದ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿ, ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿಸುವಲ್ಲಿ ಹರಿಯಾಣದ ವಿಕಾಸ ಅತಿಮುಖ್ಯವಾಗಿದೆ ಎಂದರು. ಕೇಂದ್ರ ಸರ್ಕಾರ ಬಡವರು, ಮಹಿಳೆಯರು, ರೈತರು ಹಾಗೂ ಯುವಕರ ಸಶಕ್ತೀಕರಣಕ್ಕಾಗಿ ಶ್ರಮಿಸುತ್ತಿದೆ. ತಮ್ಮ ಸರ್ಕಾರದ ಮೂರನೇ ಅವಧಿಯಲ್ಲಿ ನೂರು ದಿನಗಳೊಳಗೆ ೧೫ ಲಕ್ಷ ಕೋಟಿ ರೂಪಾಯಿಗೂ ಅಧಿಕ ಮೌಲ್ಯದ ಹೊಸ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಬಡವರಿಗಾಗಿ ಮೂರು ಕೋಟಿ ಮನೆ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ. ೧೧ ಲಕ್ಷ ಮಹಿಳೆಯರನ್ನು ಲಖ್‌ಪತಿ ದೀದಿಗಳನ್ನಾಗಿ ಮಾಡಲಾಗಿದೆ ಎಂದು ನರೇಂದ್ರ ಮೋದಿ ತಿಳಿಸಿದರು. ೭೦ ವರ್ಷ ವಯೋಮಾನದ ಹಿರಿಯ ನಾಗರಿಕರಿಗೆ ೫ ಲಕ್ಷ ರೂಪಾಯಿವರೆಗೆ ಉಚಿತ ಆರೋಗ್ಯ ಉಪಚಾರ ಒದಗಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಪ್ರಧಾನಮಂತ್ರಿ ತಿಳಿಸಿದರು.

********

ಮುಂಬರುವ ಹರಿಯಾಣ ವಿಧಾನಸಭಾ ಚುನಾವಣೆಗಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಮೂವರು ಹಿರಿಯ ಸದಸ್ಯರನ್ನು ವೀಕ್ಷಕರನ್ನಾಗಿ ನೇಮಿಸಿದ್ದಾರೆ. ಅಶೋಕ್ ಗೆಹ್ಲೋಟ್, ಅಜೇಯ್ ಮಾಕನ್ ಮತ್ತು ಪ್ರತಾಪ್ ಸಿಂಗ್ ಬವೆಜ ಅವರನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ. ಹರಿಯಾಣ ವಿಧಾನಸಭೆಗಾಗಿ ಮತದಾನ ಮುಂದಿನ ತಿಂಗಳ ೫ರಂದು ನಿಗದಿಯಾಗಿದೆ. ಮತ ಎಣಿಕೆ ೮ ರಂದು ನಡೆಯಲಿದೆ.

********

ಹಿಂದಿ ಹಾಗೂ ಇತರ ಪ್ರಾದೇಶಿಕ ಭಾಷೆಗಳ ನಡುವಿನ ಸಂಬಂಧವನ್ನು ಬಲಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಅವರು ನವದೆಹಲಿಯಲ್ಲಿ ಇಂದು ಆಯೋಜಿಸಲಾಗಿದ್ದ ಹಿಂದಿ ಅಧಿಕೃತ ಭಾಷೆ ವಜ್ರಮಹೋತ್ಸವ ಆಚರಣೆ ಹಾಗೂ ೪ನೇ ಅಖಿಲ ಭಾರತೀಯ ರಾಜ್ಯ ಭಾಷಾ ಸಮ್ಮೇಳನ ಉದ್ಘಾಟಿಸಿ, ಮಾತನಾಡುತ್ತಿದ್ದರು. ದೇಶದ ಏಕತೆಯನ್ನು ಸಶಕ್ತಗೊಳಿಸುವಲ್ಲಿ ಹಿಂದಿ ಭಾಷೆ ಅಪ್ರತಿಮ ಪಾತ್ರವನ್ನು ವಹಿಸಿದೆ ಎಂದು ಹೇಳಿದ ಅವರು, ಹಿಂದಿ ಹಾಗೂ ಇತರ ಭಾಷೆಗಳ ನಡುವೆ ಸ್ಪರ್ಧೆ ಇಲ್ಲ, ಅವು ಒಂದಕ್ಕೊಂದು ಪೂರಕವಾಗಿವೆ. ಎಲ್ಲ ಭಾಷೆಗಳು ಸದೃಢಗೊಂಡಾಗ ಮಾತ್ರ ಸದೃಢ ದೇಶ ಹೊರಹೊಮ್ಮಬಲ್ಲದು ಎಂದರು. ರಾಷ್ಟ್ರೀಯ ಶಿಕ್ಷಣ ನೀತಿ,

ಮಕ್ಕಳು ಮಾತೃಭಾಷೆಯಲ್ಲೇ ಶಿಕ್ಷಣ ಪಡೆಯಬೇಕೆಂಬ ಅಂಶಕ್ಕೆ ವಿಶೇಷ ಒತ್ತಾಸೆ ನೀಡಿದೆ. ಹಿಂದಿಯಲ್ಲಿರುವ ಎಲ್ಲ ಲೇಖನ, ಭಾಷಣ ಅಥವಾ ಸಾಹಿತ್ಯವನ್ನು ಎಲ್ಲ ಭಾರತೀಯ ಭಾಷೆಗಳಿಗೆ ಹಾಗೂ ಇದೇ ರೀತಿ ಭಾರತೀಯ ಭಾಷೆಗಳಿಂದ ಹಿಂದಿ ಭಾಷೆಗೆ ಅವುಗಳನ್ನು ಅನುವಾದಿಸಲಾಗುವುದು ಎಂದು ಗೃಹ ಸಚಿವ ಅಮಿತ್ ಶಾ ಹೇಳಿದರು. ಇದೇ ಸಂದರ್ಭದಲ್ಲಿ ಅವರು, ರಾಜ್ಯಭಾಷಾ ಗೌರವ್ ಹಾಗೂ ರಾಜ್ಯಭಾಷಾ ಕೀರ್ತಿ ಪ್ರಶಸ್ತಿಗಳನ್ನು ವಿತರಿಸಿದರು ಹಾಗೂ ಸ್ಮರಣ ಅಂಚೆ ಚೀಟಿ ಹಾಗೂ ನಾಣ್ಯವನ್ನು ಬಿಡುಗಡೆಗೊಳಿಸಿದರು.

********

ಪ್ರಧಾನಮಂತ್ರಿ ನರೇಂದ್ರ ಮೋದಿ, ಜಾರ್ಖಂಡ್‌ನ ಟಾಟಾನಗರ ರೈಲು ನಿಲ್ದಾಣದಲ್ಲಿ ನಾಳೆ ಆರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳ ಸಂಚಾರಕ್ಕೆ ಹಸಿರುನಿಶಾನೆ ತೋರಿಸಲಿದ್ದಾರೆ.ಟಾಟಾನಗರ-ಪಾಟ್ನಾ, ವಾರಾಣಸಿ-ದೇವ್‌ಗರ್, ಟಾಟಾನಗರ್-ಬ್ರಹ್ಮಪುರ, ಹೌರಾ-ಧನ್‌ಬಾದ್-ಗಯಾ, ಹೌರಾ-ದುಮ್ಕ-ಭಾಗಲ್ಪುರ್ ಮತ್ತು ಹೌರಾ-ಟಾಟಾನಗರ್-ರೂರ್ಕೆಲಾ ನಡುವೆ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸೇವೆ ಇದರಲ್ಲಿ ಸೇರಿವೆ. ಪ್ರಧಾನಮಂತ್ರಿ, ಇದೇ ಸಂದರ್ಭದಲ್ಲಿ ನಾಳೆ ಜೆಮ್‌ಶೆಡ್‌ಪುರದಲ್ಲಿ ಸಾರ್ವತ್ರಿಕ ಸಭೆಯನ್ನುದ್ದೇಶಿಸಿ ಮಾತನಾಡುವ ಕಾರ್ಯಕ್ರಮವಿದೆ. ಇದಕ್ಕೂ ಮುನ್ನ ಪೋಲ್ಯಾಬ್ಸ್ ರೌಂಡ್‌ನಿಂದ ಗೋಪಾಲ್ ಮೈದಾನದವರೆಗೆ ಸುಮಾರು ಒಂದೂವರೆ ಕಿಲೋಮೀಟರ್ ವರೆಗೆ ರೋಡ್ ಶೋ ನಡೆಸಲಿದ್ದಾರೆ.

********

ಗುಜರಾತ್‌ನ ದೆಹಗಾಮ್ ಘಟನೆ ಬಗ್ಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶೋಕ ವ್ಯಕ್ತಪಡಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಘೋಷಿಸಿದ್ದಾರೆ. ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ಮೃತಪಟ್ಟವರ ಕುಟುಂಬಕ್ಕೆ ತಲಾ ಎರಡು ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ ೫೦ ಸಾವಿರ ರೂಪಾಯಿ ನೀಡುವುದಾಗಿ ಪ್ರಧಾನಮಂತ್ರಿ ಅವರು ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

********

ಗ್ರಾಹಕರಿಗೆ ಸುಲಭ ಬೆಲೆಯಲ್ಲಿ ಈರುಳ್ಳಿ ಲಭ್ಯವಾಗುವುದನ್ನು ಖಾತ್ರಿಪಡಿಸಲು ಸಗಟು ಮಾರಾಟ ಕಾರ್ಯತಂತ್ರ ಅನುಸರಿಸಲಾಗುತ್ತಿದೆ ಎಂದು ವಾಣಿಜ್ಯ ಮತ್ತು ಉದ್ದಿಮೆ

ಸಚಿವಾಲಯ ತಿಳಿಸಿದೆ. ಬೇಡಿಕೆ - ಪೂರೈಕೆ ಪರಿಸ್ಥಿತಿ ಹಾಗೂ ಬೆಲೆ ಪ್ರವೃತ್ತಿ ಆಧರಿಸಿ, ಈರುಳ್ಳಿಯ ಸುಸ್ಥಿರ ಪೂರೈಕೆ ಮಾಡುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಗಳೊಂದಿಗೆ ಕೇಂದ್ರ ಸರ್ಕಾರ ನಿಕಟವಾಗಿ ಕಾರ್ಯ ನಿರ್ವಹಿಸುತ್ತಿದೆ. ದೇಶದ ಪ್ರತಿಯೊಂದು ಕುಟುಂಬಕ್ಕೂ ಸುಲಭ ಬೆಲೆಯಲ್ಲಿ ಈರುಳ್ಳಿ ದೊರಕಬೇಕು ಎಂಬುದು ಸರ್ಕಾರದ ಉದ್ದೇಶವಾಗಿದೆ. ಬೆಲೆ ಏರಿಕೆಗೆ ಅವಕಾಶವಾಗದಂತೆ ಗ್ರಾಹಕರ ಹಿತ ಸಂರಕ್ಷಿಸುವುದು ಸರ್ಕಾರದ ಗುರಿಯ ಆಗಿದೆ ಎಂದು ಸಚಿವಾಲಯ ತಿಳಿಸಿದೆ. ಸರ್ಕಾರ ಸಹಾಯಧನದ ಚಿಲ್ಲರೆ ಮಾರಾಟ ಕ್ರಮವನ್ನು ಕೈಗೊಂಡ ನಂತರ ಈರುಳ್ಳಿ ಬೆಲೆಯಲ್ಲಿ ಇಳಿಕೆ ಉಂಟಾಗಿದೆ. ಇದೇ ೫ನೇ ತಾರೀಕಿನಿಂದ ದೇಶದ ಪ್ರಮುಖ ನಗರಗಳಲ್ಲಿ ಸಂಚಾರಿ ವ್ಯಾನ್‌ಗಳ ಮೂಲಕ ೩೫ ರೂಪಾಯಿಗೆ ಪ್ರತಿ ಕೆಜಿ ಈರುಳ್ಳಿ ಮಾರಾಟ ಮಾಡಲಾಗುತ್ತಿದೆ. ದೆಹಲಿ, ಮುಂಬೈ ಹಾಗೂ ಚೆನ್ನೈಗಳಲ್ಲಿ ಈ ಸಗಟು ವಿತರಣೆ ನಡೆಯುತ್ತಿದ್ದು, ಇದನ್ನು ಸದ್ಯದಲ್ಲೇ ಹೈದರಾಬಾದ್, ಬೆಂಗಳೂರು ಹಾಗೂ ಕೋಲ್ಕತ್ತಾ ನಗರಗಳಿಗೆ ಹಾಗೂ ಮುಂದಿನ ದಿನಗಳಲ್ಲಿ ಪ್ರತಿ ರಾಜ್ಯದ ರಾಜಧಾನಿಗಳಿಗೆ ವಿಸ್ತರಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ.

********

ಬಾಸ್ಮತಿ ಅಕ್ಕಿಯ ರಫ್ತನ್ನು ಉತ್ತೇಜಿಸಲು ಈ ಅಕ್ಕಿಯ ರಫ್ತಿನ ಮೇಲಿನ ತಳ ದರವನ್ನು ಸಂಪೂರ್ಣವಾಗಿ ತೆಗೆದುಹಾಕಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಅಕ್ಕಿಯ ದೇಶೀಯ ಲಭ್ಯತೆ ಹಾಗೂ ವ್ಯಾಪಾರಸ್ಥರ ಬೇಡಿಕೆ ಹಿನ್ನೆಲೆಯಲ್ಲಿ ಸರ್ಕಾರ ಈ ಕ್ರಮ ಕೈಗೊಂಡಿದೆ. ಸರ್ಕಾರ ಕಳೆದ ವರ್ಷದ ಆಗಸ್ಟ್ ತಿಂಗಳಲ್ಲಿ ಒಂದು ಮೆಟ್ರಿಕ್ ಟನ್‌ಗೆ ೧೨೦೦ ಡಾಲರ್ ತಳ ದರ ನಿಗದಿಪಡಿಸಿತ್ತು. ನಂತರ ಅಕ್ಟೋಬರ್‌ನಲ್ಲಿ ಇದನ್ನು ೯೫೦ ಡಾಲರ್‌ಗೆ ತರ್ಕಬದ್ಧಗೊಳಿಸಲಾಯಿತು.

********

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ, ಈ ಬಾರಿಯ ಭಾರತ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಯುವ ನಿರ್ಮಾಪಕರಿಗಾಗಿ ಹೊಸ ವಿಭಾಗವನ್ನು ಆರಂಭಿಸಿದೆ. ಬೆಸ್ಟ್ ಡೆಬ್ಯೂ ಇಂಡಿಯನ್ ಫಿಲಂ ಸೆಕ್ಷನ್ ೨೦೨೪ ಎಂದು ಕರೆಯಲ್ಪಡುವ ಈ ವೇದಿಕೆ ಯುವ ನಿರ್ಮಾಪಕರು ಹಾಗೂ ನಿರ್ದೇಶಕರಿಗೆ ತಮ್ಮ ಪ್ರತಿಭೆಯನ್ನು ಸಾದರಪಡಿಸಲು ಅವಕಾಶ ಕಲ್ಪಿಸುತ್ತದೆ. ಈ ವಿಭಾಗಕ್ಕಾಗಿ ಗರಿಷ್ಠ ೫ ಚಲನಚಿತ್ರಗಳನ್ನು ಆಯ್ಕೆ

ಮಾಡಲಾಗುತ್ತದೆ. ಈ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಲು ಈ ತಿಂಗಳ ೨೩ ಕೊನೆಯ ದಿನವಾಗಿದೆ. ೫೫ನೇ ಭಾರತದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನವೆಂಬರ್ ೨೦ ರಿಂದ ೨೮ರ ವರೆಗೆ ಗೋವಾದಲ್ಲಿ ನಡೆಯಲಿದೆ.

********

ಆಹಾರ ಭದ್ರತೆ ಮತ್ತು ಪೋಷಕಾಂಶಗಳನ್ನು ಖಚಿತಪಡಿಸಿಕೊಳ್ಳಲು ಭಾರತ ವಿಶ್ವದ ಅತಿದೊಡ್ಡ ಆಹಾರ ಸುರಕ್ಷತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ ಎಂದು ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವ ರಾಮ್‌ನಾಥ್ ಠಾಕೂರ್ ಹೇಳಿದ್ದಾರೆ. ಅವರು ಬ್ರೆಜಿಲ್‌ನ ಕ್ಯೂಬಾದಲ್ಲಿಂದು ನಡೆದ ಜಿ-೨೦ ಕೃಷಿ ಸಚಿವರ ಸಭೆ ಉದ್ದೇಶಿಸಿ ಮಾತನಾಡಿದರು. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಭಾರತ ಕೃಷಿ ಅಭಿವೃದ್ಧಿಗೆ ಆದ್ಯತೆ ನೀಡಿದೆ; ಭಾರತ ಉತ್ಪಾದನೆಯ ಮೇಲೆ ಮಾತ್ರವಲ್ಲದೆ, ಆರ್ಥಿಕ, ಸಾಮಾಜಿಕ, ಪರಿಸರ ಸುಸ್ಥಿರತೆ ಮತ್ತು ರೈತರ ಅಭ್ಯುದಯಕ್ಕೂ ಒತ್ತು ನೀಡಿ, ಸಮಗ್ರ ದೃಷ್ಟಿಕೋನದಿಂದ ಕಾರ್ಯಕ್ರಮವನ್ನು ಸಕಾರಗೊಳಿಸುತ್ತಿವೆ ಎಂದು ಹೇಳಿದರು.

********

ಪಶ್ಚಿಮ ರಾಜ್ಯಗಳ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮೂರನೇ ಪ್ರಾದೇಶಿಕ ಸಭೆ ನಾಳೆ ಗುಜರಾತ್‌ನ ರಾಜ್‌ಕೋಟ್‌ನಲ್ಲಿ ನಡೆಯಲಿದೆ. ಕೇಂದ್ರ ಕಾರ್ಮಿಕ ಹಾಗೂ ಉದ್ಯೋಗ ಖಾತೆ ಸಚಿವ ಡಾ. ಮನ್ಸುಖ್ ಮಾಂಡವೀಯ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಮಿಕ ಸುಧಾರಣೆ, ಅಸಂಘಟಿತ ಕಾರ್ಮಿಕರ ಇ-ಶ್ರಮ ರಾಷ್ಟ್ರೀಯ ಡೇಟಾ ಬೇಸ್ ಮತ್ತು ಉದ್ಯೋಗಾವಕಾಶ ಹೆಚ್ಚಿಸುವ ಕ್ರಮಗಳ ಕುರಿತು ಈ ಸಭೆಯಲ್ಲಿ ಚರ್ಚಿಸಲಾಗುವುದು.

********

ಚೀನಾದ ಹುಲುಮ್‌ಬೈರ್‌ನಲ್ಲಿ ನಡೆದಿರುವ ಪುರುಷರ ಏಷ್ಯನ್ ಹಾಕಿ ಚಾಂಪಿಯನ್ ಶಿಪ್‌ನ ಗುಂಪು ಪಂದ್ಯದಲ್ಲಿಂದು ಭಾರತ-ಪಾಕಿಸ್ತಾನ ವಿರುದ್ಧ ೨-೧ ಗೋಲುಗಳ ಜಯ ದಾಖಲಿಸಿದೆ. ಇದು ಈ ಪಂದ್ಯಾವಳಿಯಲ್ಲಿ ಭಾರತದ ಸತತ ೫ನೇ ಗೆಲುವಾಗಿದೆ. ಪಂದ್ಯದ ಪ್ರಥಮಾರ್ಧದ ೮ನೇ ನಿಮಿಷದಲ್ಲಿ ಪಾಕಿಸ್ತಾನದ ಅಹಮದ್ ನದೀಮ್ ಮೊದಲ ಗೋಲು ಹೊಡೆದರು. ಭಾರತದ ನಾಯಕ ಹರ್ಮನ್ ಪ್ರೀತ್ ಸಿಂಗ್ ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಾಗಿ ಪರಿವರ್ತಿಸಿದರು. ಎ ಗುಂಪಿನ ಭಾರತ, ಪಾಕಿಸ್ತಾನ ಹಾಗೂ ಕೊರಿಯಾ ತಂಡಗಳು ಸೆಮಿಫೈನಲ್ಸ್ ಪ್ರವೇಶಿಸಿವೆ. ಚೀನಾ ಹಾಗೂ ಜಪಾನ್

ನಡುವೆ ನಡೆಯಲಿರುವ ಮತ್ತೊಂದು ಪಂದ್ಯ ನಾಲ್ಕನೇ ಸೆಮಿಫೈನಲ್ ತಂಡವನ್ನು ನಿರ್ಧರಿಸಲಿದೆ. ಸೆಮಿಫೈನಲ್ ಪಂದ್ಯಗಳು ೧೬ರಂದು ನಡೆಯಲಿದ್ದು, ಮರು ದಿನ ೧೭ರಂದು ಫೈನಲ್ಸ್ ನಡೆಯಲಿದೆ.

********

ಹಂಗೇರಿಯ ಬುಡಾಪೆಸ್ಟ್‌ನಲ್ಲಿ ನಡೆದಿರುವ ೪೫ನೇ ಎಫ್‌ಐಡಿಇ ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತದ ಮಹಿಳಾ ತಂಡ, ಸ್ವಿಟ್ಜರ್ಲೆಂಡ್ ವಿರುದ್ಧ ೩-೧ ಅಂತರದ ಮಹತ್ವದ ಗೆಲುವು ಸಾಧಿಸಿದೆ. ಭಾರತದ ಆರ್ ವೈಶಾಲಿ, ದಿವ್ಯ ದೇಶ್‌ಮುಖ್ ಮತ್ತು ವಂತಿಕಾ ಅಗರ್‌ವಾಲ್ ಸ್ವಿಟ್ಜರ್ಲೆಂಡ್ ಆಟಗಾರ್ತಿಯರ ವಿರುದ್ಧ ಜಯಗಳಿಸಿದರು.

ಪುರುಷರ ವಿಭಾಗದಲ್ಲಿ ಭಾರತದ ಪುರುಷರ ತಂಡ ಹಂಗೇರಿ ತಂಡವನ್ನು ಪರಾಭವಗೊಳಿಸಿತು.